ಹತ್ತಿರ ಬರಬೇಕು. ಮತ್ತು ಸಂಬಂಧಪಟ್ಟ ಸಚಿವರ ಹತ್ತಿರ ಬರಬೇಕಾಗುತ್ತದೆ. What kind of administration they are having ?

ಅಧ್ಯಕ್ಷರು.—334 ರಲ್ಲಿ ಇದಕ್ಕೆ ಅವಕಾಶ ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—334 ರಲ್ಲಿ ಅವಕಾಶ ಇಲ್ಲ ಅಂದರೆ ಹೇಗೆ? ಹೊರಗಡೆ ಕಾನೂನು ವ್ಯವಸ್ಥೆಯನ್ನು ಕೇಳುವವರೇ ಇಲ್ಲವೆ? ನಾವು ಮಾತ್ರ ನಿಯಮ ಪಾಲಿಸಬೇಕೆಂದು ಇಲ್ಲಿ ಕಟ್ಟಪ್ಪಣೆ ಕೊಡುತ್ತೀರಿ? ಈ ಸದನದ ಒಳಗಡೆ ಮಾತ್ರ ಕಾನೂನು ಪಾಲನೆಯೋ?

Mr. Speaker.--I am not concerned with the administration I am concerned with the administration of the House.

Sri Manik Rao Patil.—We are very much concerned

Mr. Speaker.--You take the Government to task in a different. ಅಲ್ಲಿ ಬರೇ ಕೇಳುವುದಕ್ಕೇ ಅಲ್ಲ, ಉತ್ತರ ಪಡೆಯುವುದಕ್ಕೂ ನಿಮಗೆ ಅಧಿಕಾರ ಇದೆ.

(ಗೊಂದಲ)

Mr. Speaker.—It is not correct. Let us have some discipline in the House....

(Interruptions)

ಶ್ರೀ ಎನ್. ಚಿಕ್ಕೇಗೌಡ.—ಈ ವಿಚಾರದಲ್ಲಿ ಸರ್ಕಾರವನ್ನು ಕೇಳಲು ನಮಗೆ ಹಕ್ಕಿಲ್ಲವೇ? ಈರೀತಿ ಪದೇ ಪದೇ ವರ್ಗಾವಣೆ ಮಾಡುವುದು ಸರಿಯೇ? ಇದು ಸರಕಾರ ನಡೆಸುವ ರೀತಿಯೇ?

ಅಧ್ಯಕ್ಷರು.—ಸರ್ಕಾರ ಯಾವ ರೀತಿ ಆಡಳಿತ ನಡೆಸುತ್ತದೆಂದು ಕೇಳತಕ್ಕದ್ದು ನಿಮ್ಮ ಕರ್ತವ್ಯ, ನಿಮ್ಮ ಜವಾಬ್ದಾರಿ ಹಾಗೂ ಅಗ್ ನಿಮ್ಮ ಹಕ್ಕು. ಈ ಬಗ್ಗೆ ಕೇಳಲು ನಿಮ್ಮ ಎಲ್ಲಾ ರೀತಿಯ ಅವಕಾಶ ಗಳೂ ಇವೆ. ಆದರೆ ನಿಯಮ 334ರ ಕೆಳಗೆ ಇದನ್ನೆಲ್ಲಾ ಪ್ರಸ್ತಾಪ ಮಾಡುವುದರ ಮೂಲಕ ನನ್ನ ಕೈಕಟ್ಟಬೇಡಿ. ತಾವು ಬೇಕಾದರೆ ಇಂತಹ ವಿಚಾರಗಳನ್ನು ಬೇರೆ ನಿಯಮಗಳ ಪ್ರಕಾರ ಇಲ್ಲಿ ಪ್ರಸ್ತಾಪ ಮಾಡಬಹುದು.

(x) Re : Strike by Pailwan Bedi factory Workers at Puttur

ಶ್ರೀ ಕೆ. ರಾಮಭಟ್.—ಮಾನ್ಯ ಅಧ್ಯಕ್ಷರೆ, 1980–81 ರಲ್ಲಿ ಮಂಗಳೂರಿನಲ್ಲಿ ಜಬ್ಬಲ್‌ಪುರ ದಿಂದ ಬಂದಂಥ ಶ್ರೀ ಮೋಹನ್‌ಲಾಲ್ ಹರಗೋವಿಂದ ದಾಸ್ ಎಂಬ ಹೆಸರಿನವರು ಫೈಲ್ವಾನ್ ಬೀಡಿ ತಯಾರಿಕಾ ಸಂಸ್ಥೆಯನ್ನು ತೆರೆದರು; ಈ ಸಂಸ್ಥೆಯಲ್ಲಿ ಎರಡು ಸಾವಿರ ನೌಕರರು ಕೆಲಸ ಮಾಡುತ್ತಿದ್ದರು ಆದರೆ ಈ ಸಂಸ್ಥೆಯನ್ನು ಇದ್ದಕ್ಕಿದ್ದಂತೆ ಮುಚ್ಚಿ ಪುತ್ತೂರಿನಲ್ಲಿ ಸದರನ್ ಇಂಡಿಯಾ ಬೀಡಿ ಮ್ಯಾನು ಫ್ಯಾಕ್ಚರರ್ಸ್ ಎಂಬ ಹೆಸರಿನಲ್ಲಿ ಹೊಸ ಸಂಸ್ಥೆಯನ್ನು ಪ್ರಾರಂಭ ಮಾಡಿದ್ದಾರೆ. ಈ ಮೊದಲು ಕೆಲಸ ಮಾಡುತ್ತಿದ್ದ ನೌಕರರಿಗೆ ಯಾವ ಪರಿಹಾರವನ್ನೂ ಕೊಟ್ಟಿಲ್ಲ. ಬೋನಸ್ ಮುಂತಾದ ಯಾವುದೇ ಸೌಲಭ್ಯವನ್ನೂ ಸಹ ಕೊಡದೆ ಈಗ ಮತ್ತೆ ಪುತ್ತೂರಿನಲ್ಲಿ ಇದೇ ಹೆಸರಿನ ಬೀಡಿಯನ್ನು ತಯಾರು ಮಾಡುತ್ತಿದ್ದಾರೆ. ಈ ಕಾರಣದಿಂದ ಮಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ ನೌಕರರು ಪುತ್ತೂರಿನ ಕಚೇರಿ ಮುಂದೆ ಸತ್ಯಾಗ್ರಹ ಮಾಡುತ್ತಿದ್ದಾರೆ. ಇದರಿಂದ ಅಲ್ಲಿ ಕಾನೂನು ಭಂಗವಾಗುವ ಪರಿಸ್ಥಿತಿ ಇದೆ. ಈ ಬಗ್ಗೆ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಂತೆ ಕಾಣಲಿಲ್ಲ. ಈಗಲಾದರೂ ಸರ್ಕಾರ ಮಧ್ಯೆ ಪ್ರವೇಶಿಸಿ, ಮೊದಲು ಕೆಲಸ ಮಾಡುತ್ತಿದ್ದ ನೌಕರರಿಗೆ ಸೂಕ್ತ ನ್ಯಾಯ ದೊರಕಿಸಿಕೊಡಬೇಕೆಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಬಗ್ಗೆ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕಾರ್ಮಿಕ ಮಂತ್ರಿಗಳಿಗೆ ಹೇಳುತ್ತೇನೆ;